ಈ) ಹಾಗಿದ್ದಲ್ಲಿ ಈ ಮಹಿಳಾ ವಿಶೇಷ ಬಸ್ಸನ್ನು ತೆಗೆದುಹಾಕಲು ಕಾರಣಗಳೇನು?

ಉ) ಈ ಮಹಿಳಾ ವಿಶೇಷ ಬಸ್ ಸೌಲಭ್ಯವನ್ನು ಪುನರಾರಂಭಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಪ್ರತಿನಿತ್ಯ ನಾಲ್ಕು ಬಸ್ಸುಗಳನ್ನು ೧೯೩೦, ೧೯೩೫, ೧೯೪೦ ಮತ್ತು ೧೯೪೫ಕ್ಕೆ ಒಡಿಸಲಾಗುತ್ತಿದೆ.

ಆ) ಇಲ್ಲ

ಇ) ಇತ್ತು

ಈ) ಈ ಮಹಿಳಾ ವಿಶೇಷ ಬಸ್ಸನ್ನು ಬಹಳ ದಿವಸಗಳವರೆಗೆ ಪ್ರಾಯೋಗಿಕವಾಗಿ ಓಡಿಸಲಾಗಿ ಮಹಿಳೆಯರಿಂದ ಹೆಚ್ಚಿನ ಉತ್ತೇಜನ ಕಂಡುಬರಲಿಲ್ಲವಾದ್ದರಿಂದ ಸದರಿ ಮಹಿಳಾ ಬಸ್ಸನ್ನು ಸಾರ್ವಜನಿಕ ಬಸ್ಸನ್ನಾಗಿ ಪರಿವರ್ತಿಸಲಾಯಿತು.

ಉ) ಸಾಕಷ್ಟು ಮಹಿಳಾ ಪ್ರಯಾಣಿಕರಿಂದ ಬೇಡಿಕೆ ಬಂದಲ್ಲಿ ಪರಿಶೀಲಿಸಲಾಗುವುದು.

## ವರದಿಯನ್ನು ಒಪ್ಪಿಸುವುದು

ಶ್ರೀ ಬಿ.ಆರ್. ಯಾವಗಲ್ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎಂಟನೇ ವರದಿಯನ್ನೊಪ್ಪಿಸುತ್ತಿದ್ದೇನೆ.

ಶ್ರೀ ಎಂ ಎಲ್. ಉಸ್ತಾದ್ (ಮಾನ್ಯ ಬಾಬುರೆಡ್ಡಿ ತುಂಗಳ್‌ರವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಈ ವರದಿಯನ್ನು ಒಪ್ಪಬಹುದೆಂದು ಭಾವಿಸುತ್ತೇನೆ,

ಅಧ್ಯಕ್ಷರು.—ವರದಿಯನ್ನೊಪ್ಪಿಸಲಾಯಿತು,—ಈಗ ಗವನ ಸೆಳೆಯುವ ಸೂಚನೆ..

ಶ್ರೀ ಆರ್. ವೆಂಕಟ ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳೋಣವೆಂದು ತಾವು ನಿನ್ನೆಯದಿವಸ ಹೇಳಿದ್ದೀರಿ...

ಅಧ್ಯಕ್ಷರು.—ಮೊದಲು ಕಾಲಿಂಗ್ ಅಟೆನ್‌ಷನ್‌ನ್ನು ಮುಗಿಸಿ ನಂತರ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳೋಣ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇವತ್ತು ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳುತ್ತೀರೆಂದು ಹೇಳಿದ್ದೀರಿ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು.—ಗವನ ಸೆಳೆಯುವ ಸೂಚನೆಯನ್ನು ಮುಗಿಸಿ ನಂತರ ತೆಗೆದುಕೊಳ್ಳೋಣ.

ಶ್ರೀ ಎಂ.ಎಸ್. ಕೃಷ್ಣನ್.—ಆ ರೀತಿ ಮಾಡಲು ಆಗುವುದಿಲ್ಲ. ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ಮೊದಲು ಹಕ್ಕು ಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಮೊದಲು ಗವನ ಸೆಳೆಯುವ ಸೂಚನೆ ಆಗಲಿ, ನಂತರ ತೆಗೆದುಕೊಳ್ಳೋಣ.

ಶ್ರೀ ಎಂ.ಎಸ್. ಕೃಷ್ಣನ್.— ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ತಾವು ಆ ರೀತಿ ಮಾಡಲು ಆಗುವುದಿಲ್ಲ

ಅಧ್ಯಕ್ಷರು.—ಅವರು ಒಪ್ಪಿಕೊಂಡಿದ್ದಾರೆ. ನೀವು ಒಪ್ಪಿಕೊಂಡಿದ್ದೀರಿ, ಅಜೆಂಡದಲ್ಲಿ ಅತೀ ವೈಷ್ಟಿ ಮುಂತಾದ ಮಹತ್ವದ ವಿಚಾರಗಳಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹೇಳಿದ್ದನ್ನು ನಾವು ಕೇಳಿದ್ದೇವೆ, ನಾವು ಪ್ರಿವಿಲೇಜ್ ಮೋಷನ್ ಮೂವ್ ಮಾಡಿದಾಗ ತಾವು ಚರ್ಚೆಗೆ ಅವಕಾಶ ಕೊಡುವುದಿಲ್ಲ ?

ಶ್ರೀ ಎಂ.ಎಸ್. ಕೃಷ್ಣನ್.—ನಾವು ಪ್ರಿವಿಲೇಜ್ ನೋಟೀಸ್ ಕೊಟ್ಟು ನಾಲ್ಕು ದಿವಸಗಳಾಯಿತು ನಾಲ್ಕು ದಿವಸಗಳಿಂದ ಹೇಳಿಕಳುಹಿಸುತ್ತಿದ್ದೇವೆ. ಅವರು ಬರುತ್ತಿಲ್ಲ.

ಅಧ್ಯಕ್ಷರು.—ಅವರು ಬರುವಂತೆ ನಾನು ಹೇಳಿಕಳುಹಿಸುತ್ತೇನೆ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಕ್ಕುಚ್ಯುತಿ ನಿರ್ಣಯದಮೇಲೆ ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ. ಆಮೇಲೆ ಬೇಕಾದರೆ ಅವರು ಬರಲಿ:

ಶ್ರೀ ವಿ. ಲಕ್ಷ್ಮೀಸಾಗರ್.—ಹಕ್ಕುಚ್ಯುತಿ ನಿರ್ಣಯವನ್ನು ಪ್ರಸ್ತಾಪ ಮಾಡುವುದಕ್ಕೆ ನಮ್ಮನ್ನು ಕೇಳಬೇಕಾಗಿಲ್ಲ. ತಮ್ಮ ಆದೇಶದ ಪ್ರಕಾರ ಮಾಡಬಹುದು.

ಅಧ್ಯಕ್ಷರು.—ಇವತ್ತೇ ತೆಗೆದುಕೊಳ್ಳೋಣ, ಆದರೆ ಮೊದಲು ಗಮನ ಸೆಳೆಯುವ ಸೂಚನೆ ಮುಗಿಯಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹಾಗೆ ಹೇಳುವುದಕ್ಕೆ ರೂಲ್ಸ್ ಪ್ರಕಾರ ಬರುವುದಿಲ್ಲ. ನಾವು ನೋಟೀಸ್ ಕೊಟ್ಟಿದ್ದೇವೆ. ಮೊದಲು ಮಾನ್ಯ ಶ್ರೀ ಕೃಷ್ಣನ್‌ರವರು ಸಹ ನೋಟೀಸ್ ಕೊಟ್ಟಿದ್ದಾರೆ

ಶ್ರೀ ಎಂ.ಎಸ್. ಕೃಷ್ಣನ್.—ನಾನು ಮೊದಲೇ ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ನಾಲ್ಕನೆಯ ತಾರೀಖು ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗಾಗಲೇ ಇದೇ ವಿಷಯದಲ್ಲಿ ನಿಲುವಳಿ ಸೂಚನೆಯ ಮೇಲೆ ಒಂದು ದಿನ ಚರ್ಚೆಯಾಗಿದೆ. We have to find out technically as to whether there is breach of previlage or not. We will not go into the details again and again. ಮೊದಲು ನಾರ್‌ಮಲ್ ಬಿಸಿನೆಸ್ ಆಗಲಿ. ನಂತರ ಈ ಮೋಷನ್ ಮೇಲೆ ಚರ್ಚೆ ಮಾಡಬಹುದು. ಆಗ ಹೆಚ್ಚು ಸಮಯ ತೆಗೆದುಕೊಳ್ಳಬಹುದು

ಶ್ರೀ ಬಿ. ಬಸವಲಿಂಗಪ್ಪ.—ಇಂದಿನ ಪತ್ರಿಕೆಗಳಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಅವರ ಪ್ರಕಾರ ನೋಡಿದರೆ ಈಗಾಗಲೇ ಪ್ರಿವಿಲೇಜ್ ಆಗೇ ಬಿಟ್ಟಿದೆ. He has already accepted the breach of privilege. It is only to be referred to the Privilege Committee.

ಶ್ರೀ ಎಸ್.ಆರ್. ಬೊಮ್ಮಾಯಿ.—ತಪ್ಪು ವಾದವನ್ನು ಹೇಳಬಹುದು. ಬೇಡ ಎನ್ನುವುದಿಲ್ಲ.

SRI B. BASAVALINGAPPA.—I think you have read the Deccan Herald of to day. He has held a Press Conference and he has admitted that he has done it.

ಶ್ರೀ ಎಂ.ಎಸ್. ಕೃಷ್ಣನ್.—ಅವರು ಮಾತನಾಡುವ ರೀತಿ ನೋಡಿದರೆ ಪ್ರಿವಿಲೇಜ್ ಮೋಷನ್ ಬದಲು ಬಿಡುವುದಿಲ್ಲ. ೩-೪-೫-೬-೭ನೇ ತಾರೀಖು ಆಯಿತು ಇನ್ನು ಬಾಡ ತೆಗೆದುಕೊಳ್ಳುವುದಕ್ಕೆ ಆಗಂವುದಿಲ್ಲವೆಂದು ಹೇಗೆ? It is not fair

( ಗೊಂದಲ )

ಶ್ರೀ ಆರ್. ವೆಂಕಟರಾಮಯ್ಯ.—ತಾವು ನಿನ್ನೆ ಒಪ್ಪಿಕೊಂಡಿದ್ದೀರಿ, ಆದರೂ ಏಕೆ ಮುಂದಕ್ಕೆ ಹಾಕುತ್ತಿದ್ದೀರಿ ಗೊತ್ತಿಲ್ಲ ?

ಶ್ರೀ ಎಸ್.ಆರ್ ಬೊಮ್ಮಾಯಿ.—ಈಗಾಗಲೇ ಇದರ ಬಗ್ಗೆ ಉಳಿದ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ ಆದರೆ ಈ ದಿನ ಚರ್ಚೆ ಮಾಡಬೇಕಾಗಿರುವುದು ಹಕ್ಕುಚ್ಯುತಿ ಆಗುತ್ತದೆಯೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ಮಾತ್ರ ಆಷ್ಟಕ್ಕೆ ಹಿಂದಿನ ಚರ್ಚೆ ಸೀಮಿತವಾಗಿರಬೇಕು. ಆದರೂ ನನ್ನದೊಂದು ಸಲಹೆ ಇದೆ ನಾನು ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳುವುದು ಬೇಡವೆಂದು ಹೇಳುವುದಿಲ್ಲ ಆದರೆ ಮೊದಲು ಕಾರ್ಯಕ್ರಮ ಪಟ್ಟಿಯಲ್ಲಿರುವ ವಿಷಯವನ್ನು ತೆಗೆದುಕೊಳ್ಳೋಣ ಅನಂತರ ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳಬಹುದ .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಮೊದಲು ಹಕ್ಕುಚ್ಯುತಿ ನಿರ್ಣಯದ ಮೇಲೆ ಚರ್ಚೆ ಮುಗಿಯಲಿ. ಆ ನಂತರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ, ತಾವು ಮುಖ್ಯ ಮಂತ್ರಿಗಳು ಒಂದಕೂಡಲೇ ವಿಷಯವನ್ನು ತೆಗೆದುಕೊಳ್ಳೋಣವೆಂದು ಹೇಳಿದಿರಿ, ಆ ಪ್ರಕಾರ ನಾವು ಒಪ್ಪಿಕೊಂಡೆವು ಆದರೆ ತಾವು ಮಾತ್ರ ನಮಗೆ ಕರ್ಟಿಸಿ ತೋರಿಸಲಿಲ್ಲ. ಶ್ರೀ ರಾಮಕೃಷ್ಣ ಹೆಗಡೆಯವರು ಪ್ರೆಸ್ ಕಾನ್‌ಫರೆನ್ಸ್ ಮಾಡಿ, ಕಾಂಗ್ರೇಸ್‌ಗೆ ಧೈರ್ಯವಿದ್ದರೆ ಅದು ಮಾಡಲಿ, ಇದು ಮಾಡಲಿ ಎಂದು ಹೇಳಿಕೆ ಕೊಟ್ಟಿದ್ದಾರೆ. ಆದುದರಿಂದ ಈಗ ಮೊದಲು ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳೋಣ, ಹಕ್ಕುಚ್ಯುತಿ ಆಗಿರುತ್ತದೆಯೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ಚರ್ಚೆ ಮಾಡೋಣ ನಾವು ವಿವರವಾಗಿ ಹೋಗುವುದು ಬೇಡ. ಅನೇಕ ಹೊಸ ಪಾಯಿಂಟ್‌ಗಳು ಇವೆ. ಆದುದರಿಂದ ಮೊದಲು ಇದಕ್ಕೆ ಅವಕಾಶ ಕೊಡಿ. ಇದಾದ ಮೇಲೆ ಉಳಿದ ವಿಷಯಗಳನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.— ನನ್ನದೊಂದು ವಿನಂತಿ ತಾವು ರೂಲ್ಸ್ ಆಫ್ ಪ್ರೊಸೀಜರ್ ನೋಡಬೇಕು. ಅದು ತಮಗೆ ಗೊತ್ತಿದೆ ಅಂತ ಭಾವಿಸುತ್ತೇನೆ ಏಕೆಂದರೆ ತಾವು ಸ್ಪೀಕರ್. ಆದರೆ ಒಂದು ವಿಷಯವನ್ನು ಓದಬೇಕು ಅಂತ ಇದ್ದೇನೆ. ಅದರಲ್ಲಿ ಏನು ಹೇಳುತ್ತದೆ. ಎಂದರೆ

> "The Speaker if he gives consent under rule 190 and holds that the matter proposed to be discussed is in order shall after the questions and before the list of business is entered upon, call the member concerned, who shall rise..."

I will have to raise immediately after the question hour and I am now raising it ಎರಡನೆಯದು, ಗಮನ ಸೆಳೆಯುವ ಸೂಚನೆ, ಲಿಸ್ಟ್ ಆಫ್ ಬಿಜಿನೆಸ್ ಆಗಿಬಿಡಲಿ, ಅಡ್ಜಸ್ಟ್ ಮಾಡಿಕೊಳ್ಳಿ ಅಂತ ಹೇಳುತ್ತಿದ್ದೀರಿ. It is not in accordance with the rules of procedure. A new procedent is going to be created here. ನಾಳೆ ದಿನ ಇದೇ ಸದನದಲ್ಲಿ ಈ ಕಡೆಯ ಸದಸ್ಯರೊಬ್ಬರು, ಇವರ ಮೇಲೆ ಪ್ರಿವಿಲೇಜ್ ಮೋಷನ್ ತೆಗೆದುಕೊಂಡು ಬರುತ್ತಾರೆ ಅಂತ ಇಟ್ಟುಕೊಳ್ಳೋಣ. ಆಗ ಈ ತರಹ ಅಕಾಮಡೇಟ್ ಮಾಡಿ ಅಂತ ಹೇಳಿದರೆ ಮಾಡುತ್ತಾರೆಯೇ ? ಮಾಡುವುದಿಲ್ಲ. ಲೋಕ ಸಭೆಯ ಡಿಬೇಟನ್ನೂ ಕೂಡ ತಾವು ತೆಗೆದು ನೋಡಬೇಕು. ಅಲ್ಲೂ ಕೂಡ ಪ್ರಿವಿಲೇಜ್ ಮೋಷನ್‌ಗೆ ತನ್ನದೇ ಆದ ಮಹತ್ವ ಇದೆ. ಅದನ್ನು ಮೊದಲೇ ತೆಗೆದುಕೊಳ್ಳಬೇಕು. ಅದೂ ರೂಲ್ಸ್ ಪ್ರಕಾರ. A privilage motion has got its sancity.

ಶ್ರೀ ಬಿ. ಬಸವಲಿಂಗಪ್ಪ.— ರೂಲ್ಸ್ ನಂಬರ್ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.— ರೂಲ್ಸ್ ನಂಬರ್ ಹೇಳಿದ್ದೇನಲ್ಲಾ, ಇನ್ನೊಂದು ಸಾರಿಯೂ ಹೇಳುತ್ತೇನೆ: ರೂಲ್ ನಂ. ೧೯೦.

ಶ್ರೀ ಎಸ್. ಆರ್. ಬೊಮ್ಮಾಯಿ.— ರೂಲ್ಸ್ ಪ್ರಕಾರ ಬೇರೆ ಬಿಜಿನೆಸ್ ಆಗುವ ಮೊದಲೇ ಇದನ್ನು ತೆಗೆದುಕೊಳ್ಳಬೇಕು ಅಂತ ಇದೆ, ಆದರೆ ಅನೇಕ ಸಾರಿ ಕೊನೆಗೂ ತೆಗೆದುಕೊಂಡ ಉದಾಹರಣೆಗಳು ನಮ್ಮಲ್ಲೇ ಇವೆ. ಕೊನೆಯಲ್ಲಿ ತೆಗೆದುಕೊಂಡರೆ ಎಲ್ಲವನ್ನೂ ಒಟ್ಟಿಗೇ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಸದಸ್ಯರು ಊರಿಗೆ ಹೋಗುವವರು ಇದ್ದಾರೆ ಅನೇಕ ಸಬ್ಜೆಕ್ಟ್‌ಗಳೂ ಕೂಡ ಇವೆ. ಅದು ಮುಗಿಸಿದ ಮೇಲೆ ತೆಗೆದುಕೊಳ್ಳೋಣ. ಇದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. By consent we can do it. ಗಮನ ಸೆಳೆಯುವ ಸೂಚನೆಗಳು ಇವೆ, ಅದು ಮುಗಿದ ಮೇಲೆ ಸ್ಪೆಷಲ್ ಬಿಲ್ಸ್‌ಗಳು ಇವೆ. ಟೆಕ್ನಿಕಲಿ ಸರಿಯಾಗಿಲ್ಲದಿದ್ದರಿಂದ ಇವತ್ತು ಅವುಗಳನ್ನು ಮತ್ತೆ ತೆಗೆದುಕೊಳ್ಳಬೇಕಾಯಿತು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ನಿನ್ನೆಯೇ ನೀವು ಇದ್ದಿದ್ದರೆ ಮುಗಿದು ಹೋಗುತ್ತಿತ್ತು. ಆದರೂ ಇವತ್ತು ಆ ಬಿಲ್ಲುಗಳನ್ನು ಪಾಸ್ ಮಾಡಿಕೊಡುತ್ತೇವೆ. ಆದರೆ ಪ್ರಿವಿಲೇಜ್ ಮೋಷನ್ ಅನ್ನು ಮೊದಲು ತೆಗೆದುಕೊಳ್ಳಬೇಕು.

SRI S. R. BOMMAI. — Let the calling attentions be over first.

SRI M. MALLIKARJUNA KHARGE. — As per rules we shall go.

ಶ್ರೀ ಎಸ್. ಆರ್. ಬೊಮ್ಮಾಯಿ. — ಇವೆಲ್ಲಾ ಅರ್ಧ ಗಂಟೆಯಲ್ಲಿ ಮುಗಿದು ಹೋಗುತ್ತವೆ. ಆಮೇಲೆ ತೆಗೆದುಕೊಳ್ಳೋಣ. Have your own time afterwards.

ಶ್ರೀ ಆರ್. ವೆಂಕಟರಾಮಯ್ಯ.—ನೀವೇ ಸ್ಪಷ್ಟವಾಗಿ ಹೇಳಿದ್ದೀರಿ. ನಾಳೆಯೇ ತೆಗೆದುಕೊಂಡು ಬಿಡ್ರಿ ಅಂತ. ಆದರೆ ಸುಮ್ಮನೇ ತಿರುಗಿ ಏಕೆ ಈ ರೀತಿ ಮಾಡುತ್ತಿದ್ದೀರಿ ಗೊತ್ತೂ ಕೂಡ.

ಶ್ರೀ ಎಂ. ಎಸ್. ಕೃಷ್ಣನ್. — ನನ್ನದೊಂದು ರಿಕ್ವೆಸ್ಟ್. ನಾವು ನಿಮಗೆ ಬಹಳ ಆಕಾಮಡೇಟ್ ಮಾಡಿದ್ದೇವೆ. ನಾವು ಇದನ್ನು ತಂದದ್ದು ೩ನೇ ತಾರೀಖು. ನಂತರ ೪ ದಿನಸಗಳೂ ನಿಮ್ಮ ಕಾರ್ಯ ಕಲಾಪಕ್ಕೆ ಆಕಾಮಡೇಟ್ ಮಾಡಿದ್ದೇವೆ ಬಿಲ್ಲುಗಳನ್ನೂ ಕೂಡ ಪಾಸು ಮಾಡಿ ಕೊಡುತ್ತೇವೆ. ನಮ್ಮ ಪ್ರಿವಿಲೇಜ್ ಮೋಷನ್‌ಗೆ ಮೊದಲು ಅವಕಾಶ ಮಾಡಿಕೊಡಿ. ಆಮೇಲೆ ಬಿಲ್ಲುಗಳನ್ನು ತೆಗೆದುಕೊಳ್ಳಿ. ಅವುಗಳನ್ನೂ ಕೂಡ ಪಾಸ್ ಮಾಡಿಕೊಡುತ್ತೇವೆ. ಬಿಲ್ಲುಗಳಿಗೆ ನಾವು ತೊಂದರೆ ಮಾಡುವುದಿಲ್ಲ. We will not come in the way of those Bills.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಕೆಲಸ ಮಾಡೋಣ. ಆಯಿತು. ಗಮನ ಸೆಳೆಯುವ ಸೂಚನೆ ಆದ ಮೇಲೆ ತೆಗೆದುಕೊಳ್ಳೋಣ.

ಅಧ್ಯಕ್ಷರು.— ಆಯಿತು. ಗಮನ ಸೆಳೆಯುವ ಸೂಚನೆ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದರಲ್ಲಿ ಎಲ್ಲರೂ ಪ್ರಶ್ನೆಯೂ ಇದೆ. ಶಾಸಕರ ಹಕ್ಕಿನ ಪ್ರಶ್ನೆಯೇ ಇದರಲ್ಲಿದೆ. ವಿರೋಧಪಕ್ಷದ ನಾಯಕರ ವಿಚಾರ ಇದೆ. ಶ್ರೀಮಾನ್ ಬಂಗಾರಪ್ಪನವರ ವಿಚಾರ ಇದೆ. ಶ್ರೀಮಾನ್ ವೊಯ್ಲಿಯವರ ವಿಚಾರ ಇದೆ. ಶ್ರೀಮಾನ್ ದೇವೇಗೌಡರ ವಿಚಾರ ಇದೆ. ಶ್ರೀಮಾನ್ ಕೆ. ಎಚ್. ಪಾಟೀಲರ ವಿಚಾರ ಇದೆ. ಅವರೆಲ್ಲರ ಟೆಲಿಫೋನ್‌ಗಳನ್ನು ಟ್ಯಾಪ್ ಮಾಡಿ. ಅವರ ಸ್ವಂತ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಆದ್ದರಿಂದ ಇದನ್ನು ಮೊದಲು ತೆಗೆದುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ. — ಬೇರೆಯದ್ದನ್ನು ಮುಂದೆ ಹಾಕೋಣ. ಮೊದಲು ಗಮನ ಸೆಳೆಯುವ ಸೂಚನೆಯಾಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನದೊಂದು ಮೊದಲೇ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಮೊನ್ನೆ ಬೀದರ್ ವಿಚಾರದಲ್ಲಿ ವಿವರಣೆಯನ್ನು ಕೇಳುವುದಕ್ಕೆ ತಯಾರಿದ್ದಂತಹ ಸಂದರ್ಭದಲ್ಲಿ ತಾವು ಅದಕ್ಕೆ ಅವಕಾಶ ಕೊಡದೆ ಏಕದಂ ಹೋಗಿಬಿಟ್ಟರಿ. ಮೊನ್ನೆ ಕೂಡ ಅದೇ ರೀತಿ ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.— ದಯವಾಡಿ ಸ್ಪೀಕರ್ ಮೇಲೆ ಆ ರೀತಿ ಮಾತನಾಡಲು ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮೊನ್ನೆ ಕೂಡ ಅದೇ ರೀತಿ ಆಯಿತು. ವಿವರಣೆಯನ್ನು ಕೇಳುವ ಮೊದಲೇ ಸಡನ್ನಾಗಿ ಅಜರ್ನ್ ಅಂತ ಹೇಳಿ ಹೊರಟುಬಿಟ್ಟರಿ. ಅದಕ್ಕೇ ಆ ರೀತಿ ಮಾಡಬೇಕಾಯಿತು.

ಅಧ್ಯಕ್ಷರು.—ನೀವುಗಳು ನಿಮ್ಮ ನಿಮ್ಮ ಸ್ಥಳಗಳಲ್ಲಿ ನಿಂತು ಬೇಕಾದಷ್ಟು ಮಾತನಾಡಿ, ಆಗ ನಾನು ಸದನವನ್ನು ಮುಂದೂಡುವುದಿಲ್ಲ. ಆದರೆ ನಿಮ್ಮ ಸ್ಥಳಗಳನ್ನು ಬಿಟ್ಟು ನನ್ನ ಮೇಲೆ ಬಂದಾಗ ಅನಿವಾರ್ಯವಾಗಿ ಮುಂದಕ್ಕೆ ಹಾಕಬೇಕಾಗಿ ಬಂತು.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ, ಕಾಲಿಂಗ್ ಅಟೆನ್‌ಷನ್ ಆದ ಕೂಡಲೇ ಇದನ್ನು ತೆಗೆದುಕೊಳ್ಳಲು ಬಹಳವಾಗಿ ಕೇಳಿದ್ದೇವೆ. ಮತ್ತೆ ಇಲ್ಲಿರುವ ಮಾನ್ಯ ಸದಸ್ಯರೂ ಕೂಡ ಬಹಳವಾಗಿ ಹೇಳಿದ್ದಾರೆ ನಾವು ಅವರಿಗೂ ಕೂಡ ಹರಕತ್ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇಷ್ಟು ಮಾತ್ರ ಹೇಳುವುದು ಇಮ್ಮಿಡಿಯೇಟ್ ಆಗಿ ತೆಗೆದುಕೊಳ್ಳಿ. ಈ ಸಭೆ ನಡೆಯುವ ತನಕ ನೀವು ಮುಖ್ಯಮಂತ್ರಿಗಳನ್ನು ಉದ್ದೇಶಿಸಿ ಇರಬೇಕು.